## ಸಮಾಜ ಕಲ್ಯಾಣ ಇಲಾಖೆ



# ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಬೆಂಗಳೂರು

## ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಆಯೋಗದ ಮಾಹಿತಿ

ಸ್ಥಳ: ವಿಕಾಸಸೌಧ,
ಬೆಂಗಳೂರು

ದಿನಾಂಕ: 02.03.2022
ಮಧ್ಯಾಹ್ನ 3.00 ಗಂಟೆಗೆ



ಯಂತ್ರಗಳನ್ನು ಬಳಸಿರಿ, ಮನುಷ್ಯರನ್ನು
ಮ್ಯಾನ್‌ಹೋಲ್‌ಗೆ ಇಳಿಸುವುದು ಅಪರಾಧ


# ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ
## ಸಂಕ್ಷಿಪ್ತ ಟಿಪ್ಪಣಿ

- ಸಫಾಯಿ ಕರ್ಮಚಾರಿಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಹಾಗೂ ಅವರ ಸಾಮಾಜಿಕ ಭದ್ರತೆಗಾಗಿ ಆಯೋಗವು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಅಧಿನಿಯಮ 2013ರ ಅನ್ವಯ ದಿನಾಂಕ:01.02.2013 ರಿಂದ ಅಸ್ತಿತ್ವಕ್ಕೆ ಬಂದು ಕಾರ್ಯನಿರ್ವಹಿಸುತ್ತಿದೆ.
- **ಸಫಾಯಿ ಕರ್ಮಚಾರಿಗಳೆಂದರೆ,** ಸ್ಥಳೀಯ, ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಖಾಯಂ ಅಥವಾ ಗುತ್ತಿಗೆ ಆಧಾರದ ಮೇಲೆ ರಸ್ತೆ ಗುಡಿಸಲು ಅಥವಾ ನೈರ್ಮಲ್ಯ ಮತ್ತು ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸಲು ನೇಮಕ ಮಾಡಿಕೊಳ್ಳಲಾದ ವ್ಯಕ್ತಿಗಳು, ಸಫಾಯಿ ಕರ್ಮಚಾರಿಗಳೆಂದರೆ ಮೂಲತಃ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಲ್ಲ.
- **ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಎಂದರೆ;** ದೈಹಿಕವಾಗಿ ಮನುಷ್ಯನ ಮಲ-ಮೂತ್ರವನ್ನು ಸಂಪೂರ್ಣ ಕೊಳೆಯುವ ಮೊದಲೇ ಸ್ವಚ್ಛಗೊಳಿಸಲು ತೆರೆದ ಚರಂಡಿಗಳು, ಗುಂಡಿಗಳು, ರೈಲ್ವೆ ಹಳಿಗಳಿಂದ ವಿಲೇವಾರಿ ಮಾಡುವ ಅನೈರ್ಮಲ್ಯ ಕಾರ್ಯದಲ್ಲಿ ನಿರತನಾಗಿರುವ ಅಥವಾ ನಿಯೋಜನೆಗೊಂಡಿರುವ ಒಬ್ಬ ವ್ಯಕ್ತಿ.

# ಆಯೋಗದ ಕಾರ್ಯ ಮತ್ತು ಜವಾಬ್ದಾರಿಗಳು:

1) ಸಫಾಯಿ ಕರ್ಮಚಾರಿಗಳ ಕುಂದುಕೊರತೆಗಳ ವಿಚಾರಣೆ ಮಾಡಿ ಅವುಗಳನ್ನು ಬಗೆಹರಿಸುವುದು.
2) ಇವರಿಗೆ ಸಮಾಜದಲ್ಲಿ ನೀಡಿರುವ ಸ್ಥಾನಮಾನ, ಸೌಲಭ್ಯಗಳು ಮತ್ತು ಅವಕಾಶಗಳಲ್ಲಿನ ಅಸಮಾನತೆಯನ್ನು ನಿರ್ಮೂಲನೆ ಮಾಡಲು ಕ್ರಮಗಳನ್ನು ಕೈಗೊಳ್ಳುವುದು.
3) ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಸರ್ಕಾರ ಅನುಷ್ಟಾನಗೊಳಿಸುತ್ತಿರುವ ಯೋಜನೆಗಳ ಅಧ್ಯಯನ, ಮೌಲ್ಯ ಮಾಪನ ಮತ್ತು ಸದರಿ ಯೋಜನೆಗಳ ಪರಿಣಾಮಕಾರಿ ಅನುಷ್ಟಾನಗೊಳಿಸುವ ಸಂಬಂಧ ಮೇಲುಸ್ತುವಾರಿ ಮಾಡುವುದು.
4) ಆಯೋಗವು ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿದ್ದು, ಸಫಾಯಿ ಕರ್ಮಚಾರಿಗಳಿಗೆ ನ್ಯಾಯ ದೊರಕಿಸಿಕೊಡುವಲ್ಲಿ, ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯ ಮುಖ್ಯಸ್ಥರನ್ನು ಕರೆಸಿ ವಿಚಾರಣೆ ಮಾಡಬಹುದು.
5) ಸಫಾಯಿ ಕರ್ಮಚಾರಿಗಳ ತೊಂದರೆಗಳನ್ನು ನಿವಾರಿಸಲು ಸಹಕಾರಿಯಾಗುವ ಸಲಹೆ, ಸೂಚನೆ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ನೀಡುವುದು.
6) ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ನಿಯತಕಾಲಿಕ ವರದಿಗಳನ್ನು ಸಲ್ಲಿಸುವುದು.
7) ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗ, ನವದೆಹಲಿ ಕಾಲಕಾಲಕ್ಕೆ ನೀಡುವ ಸಲಹಾ ಸೂಚನೆಗಳನ್ನು ಪಾಲಿಸುವುದು.


# ಆಯೋಗದ ಸಿಬ್ಬಂದಿ ರಚನೆ



# ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು ಇಲ್ಲಿಗೆ 2019-20 ರಿಂದ 2021-22 ರವರೆಗಿನ ಒದಗಿಸಿದ ಆಯವ್ಯಯದ ವಿವರ.

ರೂ ಲಕ್ಷಗಳಲ್ಲಿ

| ಕ್ರ. ಸಂ. | ವರ್ಷ | ಒದಗಿಸಿದ ಅನುದಾನ | ಬಿಡುಗಡೆ | ಖರ್ಚು |
|---|---|---|---|---|
| 1 | 2019-20 | 225.00 | 225.00 | 207.56 (17.44 ವೇತನ ಉಳಿಕೆ) |
| 2 | 2020-21 | 196.08 | 196.08 | 168.32 (27.76 ವೇತನ ಉಳಿಕೆ) |
| 3 | 2021-22 | 260.00 | 260.00 | 238.86 (28.02.2022 ಅಂತ್ಯಕ್ಕೆ) |


ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ 2013ರ ಪ್ರಕಾರ ರಚಿಸಿರುವ ಸಮಿತಿಗಳು
ಕೇಂದ್ರ ಮೇಲ್ವಿಚಾರಣಾ ಸಮಿತಿ
ರಾಜ್ಯ ಮೇಲ್ವಿಚಾರಣಾ ಸಮಿತಿ
ಜಿಲ್ಲಾ ಮಟ್ಟದ ಜಾಗೃತಿ ಸಮಿತಿ
ಉಪ ವಿಭಾಗ ಮಟ್ಟದ ಜಾಗೃತಿ ಸಮಿತಿ

# ರಾಜ್ಯದಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸಲು ಹೋಗಿ ಮೃತಪಟ್ಟ ಕಾರ್ಮಿಕರ ವಿವರ

| ಕ್ರ. ಸಂ | ವರ್ಷ | ಮೃತಪಟ್ಟವರ ಸಂಖ್ಯೆ |
|---|---|---|
| 1 | 1993-94 | - |
| 2 | 1994-95 | - |
| 3 | 1995-96 | 1 |
| 4 | 1998-99 | 3 |
| 5 | 2001-02 | 1 |
| 6 | 2007-08 | 2 |
| 7 | 2008-09 | 7 |
| 8 | 2009-10 | 3 |
| 9 | 2010-11 | 2 |
| 10 | 2011-12 | 7 |
| 11 | 2012-13 | 7 |
| 12 | 2013-14 | 7 |
| 13 | 2015-16 | 13 |
| 14 | 2016-17 | 9 |
| 15 | 2017-18 | 6 |
| 16 | 2018-19 | 4 |
| 17 | 2019-20 | 8 |
| 18 | 2020-21 | 5 |
| 19 | 2021-22 | 5 |
| ಒಟ್ಟು | Total | 90 |

# 2021-22ನೇ ಸಾಲಿಗೆ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಕ್ರಿಯಾ ಯೋಜನೆ

**ಲೆಕ್ಕ ಶೀರ್ಷಿಕೆ: 2225-01-277-0-69 (ಯೋಜನೆ)** **(ರೂ. ಲಕ್ಷಗಳಲ್ಲಿ)**

<table>
<tr><th>ಕ್ರ. ಸಂ</th><th>ಕಾರ್ಯಕ್ರಮ</th><th>ನಿಗಧಿಪಡಿಸಿದ ಅನುದಾನ</th></tr>
<tr><td>1</td><td>ಅಧಿಕಾರಿ & ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳು.</td><td>60.00</td></tr>
<tr><td>2</td><td>ಅಧ್ಯಕ್ಷರು & ಸದಸ್ಯರ ವೇತನ ಮತ್ತು ಭತ್ಯೆಗಳು.</td><td>10.00</td></tr>
<tr><td>3</td><td>ಆಯೋಗದ ನಿರ್ವಹಣೆ ಮತ್ತು ಇತರೆ ವೆಚ್ಚಗಳು.</td><td>122.62</td></tr>
<tr><td>4</td><td>ಎಂ.ಎಸ್.ಕಾಯ್ದೆ 2013ನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಸಲು ಕಲಾ ತಂಡಗಳಂದ ಬೀದಿ ನಾಟಕಗಳ ಪ್ರದರ್ಶನದ ಮೂಲಕ ಅರಿವು ಮೂಡಿಸುವುದು.</td><td rowspan="4">67.38</td></tr>
<tr><td rowspan="3">5</td><td>ಎಫ್.ಎಮ್. ರೇಡಿಯೋಗಳಲ್ಲಿ ಜಿಂಗಲ್ಸ್ ಮುಖಾಂತರ ಸ್ಕ್ಯಾವೆಂಜಿಂಗ್ ಪದ್ಧತಿಯನ್ನು ನಿಷೇಧಿಸಿರುವ ಬಗ್ಗೆ ಅರಿವು ಮೂಡಿಸುವುದು.<br>ಹೊರದೇಶ/ರಾಜ್ಯಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಅತ್ಯುಧುನಿಕ ತಂತ್ರಜ್ಞಾನದ ಮೂಲಕ ಕಾರ್ಯನಿರ್ವಹಿಸುವ ಕುರಿತು ಅಧ್ಯಯನ</td></tr>
<tr><td>ಎಂ.ಎಸ್.ಕಾಯ್ದೆ 2013ರ ಅನುಷ್ಟಾನ ಮತ್ತು ಸರ್ಕಾರಿ ಸೌಲಭ್ಯಗಳ ಮಾಹಿತಿ ಮತ್ತು ಚಿತ್ರಗಳುಳ್ಳ ಕ್ಯಾಲೆಂಡರ್‌ಗಳ ಮುದ್ರಣ.</td></tr>
<tr><td>ರಾಜ್ಯಮಟ್ಟದಲ್ಲಿ ರಾಜ್ಯ ಮೇಲ್ವಿಚಾರಣೆ ಸಮಿತಿಯ ಸದಸ್ಯರುಗಳ ಕಾರ್ಯಾಗಾರ.<br>ಅನಿಮೆಷನ್ ಮೂಲಕ ಜನಸಾಮನ್ಯರಿಗೆ ಅರಿವು ಮೂಡಿಸುವುದು.</td></tr>
<tr><td></td><td>ಒಟ್ಟು</td><td>260.00</td></tr>
</table>

# ಆಯೋಗವು ಸಾಧಿಸಿರುವ ಪ್ರಗತಿ, ಕೈಗೊಂಡಿರುವ ಕಾರ್ಯಕ್ರಮಗಳ ಮಾಹಿತಿ

- ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮರವರ ವತಿಯಿಂದ ರಾಜ್ಯದ 12 ಜಿಲ್ಲೆಗಳಲ್ಲಿ ಒಟ್ಟಾರೆಯಾಗಿ 5080 ಜನ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಗುರುತಿಸಲಾಗಿದೆ.

- ರಾಜ್ಯದಲ್ಲಿರುವ ಇನ್ನುಳಿದ 18 ಜಿಲ್ಲೆಗಳಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಗುರುತಿಸುವ ಸರ್ವೇ ಕಾರ್ಯ ಹಮ್ಮಿಕೊಳ್ಳಲಾಗುತ್ತಿದೆ.

- ರಾಜ್ಯದಲ್ಲಿ ಮ್ಯಾನ್‌ಹೋಲ್/ಸೆಪ್ಟಿಕ್ ಟ್ಯಾಂಕ್/ತೆರೆದ ಚರಂಡಿಗಳಲ್ಲಿ ಮೃತಪಟ್ಟ 90 ಕುಟುಂಬಗಳ ಪುನರ್ವಸತಿಗಾಗಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸ್ಥಿತಿ–ಗತಿಗಳ ಕುರಿತು ವಿವರವಾದ ಅಧ್ಯಯನವನ್ನು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ( ಐ.ಸೆಕ್) ರವರ ಮೂಲಕ ನಡೆಸಲಾಗುತ್ತಿದೆ.

- ರಾಜ್ಯದಲ್ಲಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಮತ್ತು ಸಫಾಯಿ ಕರ್ಮಚಾರಿಗಳ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಕಾನೂನಾತ್ಮಕ, ಸ್ಥಿತಿ–ಗತಿಗಳ ಸ್ಥಾನಮಾನ ಕುರಿತು ಅಧ್ಯಯನವನ್ನು **National Law School of India University, Bangalore** ಮೂಲಕ ನಡೆಸಲಾಗುತ್ತಿರುತ್ತದೆ.

- 2022ನೇ ಸಾಲಿನಲ್ಲಿ ಅರಿವು ಮೂಡಿಸಲು ಎಂ.ಎಸ್.ಕಾಯ್ದೆ 2013ರ ಹಾಗೂ ನಿಯಮಗಳ ಮಾಹಿತಿಯುಳ್ಳ ಕ್ಯಾಲೆಂಡರ್‌ಗಳನ್ನು ಮುದ್ರಿಸಿ ರಾಜ್ಯದ್ಯಂತ ಹಂಚಿಕೆ ಮಾಡಲಾಗಿದೆ.

- ರಾಜ್ಯದಲ್ಲಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳನ್ನು ಮತ್ತು ಸಫಾಯಿ ಕರ್ಮಚಾರಿಗಳ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಕಾನೂನಾತ್ಮಕ, ಸ್ಥಿತಿ–ಗತಿಗಳ ಸ್ಥಾನಮಾನ ಕುರಿತು ಅಧ್ಯಯನವನ್ನು National Law School of India University, Bangalore ಮೂಲಕ ನಡೆಸಲಾಗುತ್ತಿರುತ್ತದೆ.

- ರೇಡಿಯೋ ಜಿಂಗಲ್ಸ್ ಮೂಲಕ ರೇಡಿಯೋ ಮಧ್ಯಮಗಳಲ್ಲಿ ಮಾಹಿತಿಯನ್ನು ಪ್ರಸಾರ ಮಾಡಲಾಗುತ್ತಿದೆ.

- ರಾಜ್ಯದ್ಯಾಂತ ಸರ್ಕಾರಿ ಬಸ್ಸುಗಳ ಮೇಲೆ ಎಂ.ಎಸ್.ಕಾಯ್ದೆ 2013 ರ ಕಾಯ್ದೆ ಮತ್ತು ನಿಯಮಗಳನ್ನು ಒಳಗೊಂಡಂತೆ ಭಿತ್ತಿ ಚಿತ್ರವನ್ನು ತಯಾರಿಸಿ ಪ್ರದರ್ಶಿಸಲು ಕ್ರಮ ವಹಿಸಿದೆ.

# ಧನ್ಯವಾದಗಳು

ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಮುಕ್ತ ಕರ್ನಾಟಕ ನಿರ್ಮಿಸೋಣ